ಮೈಸೂರ ಗೆಜಿಟ್.

ನಂ. 6 ಸರ್ಕಾರದಿಂದ ಪಾಯಿಷ್ ಆದ್ದು. ಸ್ 1887.

ಬೆಂಗಳೂರು, ಶನಿವಾರ, ಫಿಬ್ರವರೀ ತಾ|| 12, ಸ್ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜ್‌ಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಬೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜ್‌ರು, ಡಿ|| ಡೆಪ್ಯೂಟ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು ; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 19ನೇ ಜನವರೀ 1887.

ನಂ. 221.–ಘನವನ್ನು ಹೊಂದಿದ ಶ್ರೀಮನ್ಮಹಾರಾಜ್ಞೀ–ಚಕ್ರವರ್ತಿನೀಯವರು, ತಮ್ಮಪ್ರಖ್ಯಾತವಾದ ಧಾರ್ಮಿಕ ರಾಜ್ಯಭಾರದ ಐವತ್ತನೇ ವರುಷ ವರ್ಧಂತಿಯಂ ಗೈದುವ ಶುಭಸಂಭವವನ್ನು ಉಚಿತವಾದ ಮರ್ಯಾದೆಯೊಡನೆ ಮೈಸೂರು ಶೀಮೆಯಲ್ಲೆಲ್ಲಾ ಆಚರಿಸಲ್ಪಡತಕ್ಕದ್ದೆಂತ ಶ್ರೀಮನ್ಮಹಾರಾಜರವರು ಅಪೇಕ್ಷಿಸುವದಲ್ಲದೆ, ಈ ಶೀಮೆಯ ಪ್ರಜೆಗಳೆಲ್ಲರೂ ಇದೊಂದು ಬಹಿರಂಗವಾದ ವುತ್ಸವ ವಿನೋದಗಳಿಗೆ ಸುಸಮಯದಂತೆ ಅವಲಂಬಿಸುವರೆಂದು ಸಹ ನಂಬುತ್ತಾರೆ.

2. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸುವದೇನಂದರೆ, 1887ನೇ ಇಸವಿ ಫಿಬ್ರವರೀ 16ನೇ ಬುಧವಾರವು–ಘನವನ್ನು ಹೊಂದಿದ ಚಕ್ರವರ್ತಿನೀಯವರ ರಾಜ್ಯಭಾರದ ವರ್ಧಂತಿಯ ದಿವಸವೆಂತ ಮೈಸೂರುಶೀಮೆಯಲ್ಲಿ

ಆಚರಿಸಲ್ಪಡತಕ್ಕದ್ದೆಂತಲೂ, ಮತ್ತು ಇಂಥಾ ವಿಶೇಷ ಸಮಯಕ್ಕೆ ತಕ್ಕ ವುತ್ಸವ ವಿನೋದಗಳನ್ನ ನಡಿಸಲಿಕ್ಕೆ ಯೇರ್ಪಾಡು ಮಾಡಿಕೊಳ್ಳುವ ವುದ್ದಿಶ್ಯ ಡಿಸ್ಟ್ರಿಕ್ಟು ಆಫೀಸರರುಗಳು ಈ ಸಂಗತಿಯನ್ನ ತಮ್ಮ ತಮ್ಮ ಡಿಸ್ಟ್ರಿಕ್ಟಿನೊಳಗಿನ ಪ್ರಜೆಗಳಿಗೂ, ಆಯಾ ಮ್ಯುನಿಸಿಪಾಲಿಟೀಯವರಿಗೂ ಪ್ರಸಿದ್ಧಪಡಿಸತಕ್ಕದ್ದೆಂತಲೂ ಅಪ್ಪಣೆ ಕೊಡಿಸುತ್ತಾರೆ.

3. ಆಯಾ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರುಗಳ ಮ್ಯುನಿಸಿಪಾಲಿಟೀಯವರು ಒಡಂಜನಗಳಿಗೆ ಅನ್ನ ಮತ್ತು ಒಟ್ಟೆ ಒಟವಾಡೇ ಮಾಡಲಿಕ್ಕೂ, ಪ್ರೈವೇಟ್ ವ ಪಬ್ಲಿಕ್ ಸ್ಕೂಲ್‌ಗಳ ಹುಡುಗರುಗಳಿಗೆ, ಮತ್ತು ಧರ್ಮಸ್ಥಾಪನೆಗಳಲ್ಲಿರುವ ಜನಗಳಿಗೆ ತಕ್ಕ ಬೀತನ ಮಾಡಲಿಕ್ಕೂ, ಸಾಕಾಗುವ ಮೊಬಲಗನ್ನ ಡೆಪ್ಯುಟಿ ಕಮ್ಮಿಷನರುಗಳ ಯಖ್ತ್ಯಾರಿಯಲ್ಲಿ ಮಹಾರಾಜಾ ಸರ್ಕಾರದವರು ಇಡುವರು.

4 ಈ ಶುಭ ದಿನಕ್ಕೆ ಮರ್ಯಾದೆಗಾಗಿ, ಈ ಶೀಮೆಯಲ್ಲಿ ಯೆಲ್ಲಾ ಕಡೆಯಲ್ಲೂ ಇರುವ ಮೈಸೂರು ಸವಾರ್ ಬಾರ್ ಫಾಜಿನ ಪ್ರತಿ ನ್ಯಾಕಮ್ಮಿಷನೆಡ್ ಆಫಿಸರಿಗೂ, ಶಿಪಾಯಿಗೂ ಒಂದು ದಿವಸದ ತಲಬನ್ನ ಒಹುಮಾನವಾಗಿ ಕೊಡಲ್ಪಡತಕ್ಕದ್ದೆಂತಲೂ ಸಹ ಮಹಾರಾಜಾ ಸರ್ಕಾರದವರು ಹುಕ್ಕುಂ ಮಾಡುತ್ತಾರೆ.

5. ಫಿಬ್ರವರೀ 16ನೇ ತಾರೀಖಿನ ದಿವಸವು ತಮಾಂ ಆಫಿಸ್‌ಗಳಿಗೆ ರಜಾ ದಿನವಾಗಿ ಎಣಿಸಲ್ಪಡತಕ್ಕದ್ದು.

6. ಮೇಲ್ಕಂಡ ವರ್ಧಂತಿಯ ವುತ್ಸವವನ್ನ, ಬೆಂಗಳೂರಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರು ಖುದ್ದು ನಡಿಸುವ ವುದ್ದಿಶ್ಯ ವಿಶೇಷ ಏರ್ಪಾಡುಗಳು ಮಾಡಲ್ಪಡುವವು. ಮತ್ತು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್‌ನಲ್ಲಿಯೂ ನಡಿಯಬೇಕಾದ ಸರ್ಕಾರೀ ಮರ್ಯಾದೆಯನ್ನ ಕುರಿತು ಇಸ್ಸನ್ನ ಮೇಲೆ ಹುಕುಂ ಮಾಡಲಾಧೀತು.

ತಾರೀಖು 4ನೇ ಫಿಬ್ರವರೀ 1887.

ನಂ. 232.—1887ನೇ ಇಸವಿ ಜನವರೀ 19ನೇ ಮರ್ತುಮಿನ 221ನೇ ನಂ. ವುಳ್ಳ ಇಸ್ತಿಹಾರ್‌ನಾಮೆಯನ್ನ ನುಸರಿಸಿ, ಶ್ರೀಮತ್ ಮಹಾರಾಜರವರು ಅಪ್ಪಣೇ ಕೊಡಿಸುವದೇನಂದರೆ,—ಘನವನ್ನು ಹೊಂದಿದ ಶ್ರೀಮನ್ಮಹಾರಾಜ್ಞೀ—ಚಕ್ರವರ್ತಿನೀಯವರ ಆಜ್ಞೆಯು ಐವತ್ತನೇ ವರುಷ ವರ್ಧಂತಿಯ ಗೌರವಾರ್ಥವಾಗಿ, ಮೈಸೂರು ಸರ್ಕಾರದ ದರೋಬಸ್ತು ಕಚೇರಿಗಳಿಗೆ, 1887ನೇ ಇಸವಿ ಫಿಬ್ರವರೀ 16 ವ 17 ಈ ಯರಡು ದಿನಗಳು, ರಜಾ ದಿವಸಗಳಂತೆ ಆಚರಿಸಲ್ಪಡತಕ್ಕದ್ದು.

ತಾರೀಖು 15ನೇ ಜನವರೀ 1887.

ನಂ. 220.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮವು, ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳ್ಳಿಗ್ಗೆ 11 ಘಂಟೆಗೆ ಹರಾಜು ಸುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳುಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಆಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ ದರಖಾಸ್ತು ಮಾಡುತ್ತಾರೆಯೋ ಎಂಬುವದನ್ನ ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾ

ಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು, ಹಾಗಿಲ್ಲದ ಪಕ್ಷಕ್ಕೆ ಅಂಥಾವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಋಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮ್ಮಾನಿನಲ್ಲಿ ತನಗೆ ಹಕ್ಕು ಇಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ವಿಚಾರ್ಗಳು ದೇಬೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ ಹರಾಜು ಮುನ್ಸೂಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಜಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮ್ಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡಿ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಕಾದ ಒಂದು ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ತಪಸೀಲ್ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೆ ಸ್ವತಂತ್ರರಿರುತ್ತಾರೆ; ಅಂಥಾ ಅಪ್ಪೀಲ್ನಲ್ಲಿ ಆಗುವ ಆಜ್ಞೈರ್ ಹುಕ್ಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ಹೋಬಳಿ.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್.	ಯಾವ ಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜ್ ತಾರೀಖು ವಗೈರೆ.
					ಖಂ. ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಹೊಸನಗರ.	ಹೊಳೇನರಸೀಪುರ	ಅಲಿಕೊಪ್ಪಿ	ನಾಗರಕಟ್ಟಿ	1ನರಸಿಂಹ್ಯಪಂಡಿತ, (ಘವತ್ತಿ) ಇವನಮಗಲಕ್ಷ್ಮಿ ನಾರಣಪಂಡಿತ, 2ಕೃಷ್ಣ ಪಂಡಿತ 3ನರಸಿಂಹ್ಯಪಂತ	0 0 0	181 15 5	181 6 0	350 0 6	1887ನೇ ಇಸವಿ ಫಿಬ್ರವರೀ ತಾರೀಖು 24 ಲ್ಲು ತಾಲ್ಲೂಕು ಕಛೇರಿಯಲ್ಲಿ ಅಮಲ್ದಾರ್ರ ರೂಬರೂ.

ತಾರೀಖು 25ನೇ ಜನವರೀ 1887ನೇ ಇಸವಿ.

ನಂ. 226.—ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದ್ದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೀಯಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡೀಕಂಡ ತಖ್ತೀಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಮುಗುವಾಗಿ ಉಕ್ಕೆ ಯಾವದೂ ಇಲ್ಲದೆ ಗ್ರಾಮಗಳು ಕಡೆ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರಿವೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲ್ಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲ್ಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮ್ಮಾನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರೆ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ಡೀಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ. ಹರಾಜು ಮವ್ಕುಫ್ ಮಾಡಲ್ಪಡತಕ್ಕದ್ದು, ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಕಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟ್ರಿ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಹಸೀಲ್ದಾರ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲೀ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಸತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುರ್ಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಹೋಬಳಿ.	ತಾಲ್ಲೂಕು.	ಜಿಲ್ಲೆ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜು ಬೀಜವರೀ.	ಅಂದಾಜು ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜು ಮಾಡಲ್ಪಡುತ್ತೋ ಅಂಥಾ ಸರ್ಕಾರದ ಕಂದಾಯದ ಬಾಕೀ.	ಹರಾಜು ತಾರೀಖು ನಿಗದಿ.
					ಖಂ ಕೂ. ಪ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಹೊಳೆನರಸೀಪುರ.	ಹಾಸನ.	ಹಾಸನ.	ಹರಿಹರಪುರ	ಕೃಷ್ಣಪ್ಪ, ಇತರ 45 ಮಂದಿ.	0 0 0	1062 4 1	1835 6 8	2264 5 4	1887ನೇ ಇಸವಿ ಮಾರ್ಚೀ ತಾರೀಖು 7ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲದಾರ್ರು ರೂಬರೂ.

ತಾರೀಖು 1ನೇ ಫಿಬ್ರವರೀ 1887.

ನಂ. 230.—ಸಕಲಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈಕೆಳಗೆಕಂಡ ಜೋಡೀ ವ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಹೆಚ್ಚೈ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡ ದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಜೀರೆಜೀರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಜೀರೆಜೀರೆಯಾಗಿ ಹರಾಜ್ ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಮಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜೂ ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಬೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜೂ ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವಂತತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕ್ಕುಮಿಗೆ ಸದರೀ ಕ್ರಯವು ಬಳಪಟ್ಟು ಯಿರುತ್ತೆ.

ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾಜಬೇಕಾದ ಕ್ವಿಟೆರೆಂಟ್.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟೆರೆಂಟ್.	ಯಾವಬಾಕೀಗೋಸ್ಕರ ಗ್ರಾಮಗಳು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಹುಣಸೂರು.	ಕಿರಿಕೊಡ್ಲಿ.	ಕಂಚಿಗನಹಳ್ಳಿ (ಜೋಡಿ)	ವೆಂಕಣ್ಣಾಚಾರ್ ವ ಇತರ 3 ಜನಗಳು	ಎ. ಗುಂ. ಗ. 335 58 0	ರೂ. ಆ. ಪೈ. 390 0 0	ರೂ. ಆ. ಪೈ. 262 0 0	ರೂ. ಆ. ಪೈ. 262 15 11	1887ನೇ ಇಸವಿ ಮಾರ್ಚೀ ತಾ|| 10ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರ ರೂಬರೂ.
ಹುಣಸೂರು.	ನಂಜನಗೂಡು.	ವೆಂಕಟನಾರಣಪ್ಪನದೊಡ್ಡಿ 1 ಕಾಯಂಗುತ್ತಾ	ಕೆಸ್ತೂರು ಪುಟ್ಟಣ್ಣ	ಖಂ. ಕೂ. ಪ. 5 0 0	29 0 0	30 13 0	48 8 3	ಡಿಟೋ ತಾರೀಖು 14ರಲ್ಲು ಡಿಟೋ
ಹುಣಸೂರು.	ಬೆಳ್ಳೂರು.	ಹುಂಚಿನಹಳ್ಳಿ (ಜೋಡಿ)	ಶಂಕರನಾರಣ ಭಟ್ಟು ವ ಇತರ 46 ಜನಗಳು	ಎ. ಗುಂ. ಗ. 140 19 0	364 0 0	128 9 0	230 1 3	ಡಿಟೋ ತಾರೀಖು 10ರಲ್ಲು ಡಿಟೋ.
ಹುಣಸೂರು.	ಹನಗೋಡು.	ಮಾದಾಪುರ (ಜೋಡಿ)	ಲಕ್ಷ್ಮಮ್ಮ ಉರಫ್ ಪುಟ್ಟಮ್ಮ ವ ಇತರ 26 ಜನಗಳು	448 5 0	726 12 0	156 0 9	158 5 11	ಡಿಟೋ ಡಿಟೋ

ತಾರೀಖು 22ನೇ ಡಿಸೆಂಬರ್ 1886.

ಕ್ಯಾಂಪ್ ನಂಬರ್ 1461.—ಸರ್ಕಾರ್ ನವ್ಕರರು ಜರ್ಮಿ ಉಂಟಾಗಿರುವ ವಿಷಯದಲ್ಲಿ 1870ನೇ ಇಸವಿ ಜುಲೈ 6ನೇ ಮಕ್ತುಂ 123ನೇ ನಂಬರು ಮತ್ತು ಅದೇ ಇಸವಿ ನವಂಬರ್ 10ನೇ ಮಕ್ತುಂ 260ನೇ ನಂಬರು ಈ ಇಸ್ತಿಹಾರ್‌ನಾಮೆಗಳಿಂದ ಬದಲಾಯಿಸಲ್ಪಟ್ಟಂತೆ 1863ನೇ ಇಸವಿ ಮೇ 29ನೇ ಮಕ್ತುಮಿನ ರೂಲ್ಸ್‌ಗಳಿಗೆ ತಮೂಂ ಸರ್ಕಾರ್ ನವ್ಕರರೂ ನಿಗೇ ಕೊಡತಕ್ಕದ್ದು. ಸದರೀ ರೂಲ್ಸ್‌ಗಳ ಅಮಲ್ ಚಲಾವಣಿ ದೆಸೆಯಿಂದ ತಪ್ಪಿಸಿಕೊಳ್ಳುವದಕ್ಕೆ ಯಾರಾದರೂ ಪ್ರಯತ್ನಪಟ್ಟರೆ, ಅಂಥಾ ತಪ್ಪಿತಸ್ಥನು ಸರ್ಕಾರ್ ನವ್ಕರಿಯಿಂದ ತಗ್ಯೆರ್ ಮಾಡಲ್ಪಡಲಿಕ್ಕಾಗಲೀ ಗವರ್ಮೆಂಟಿನವರು ಯುಕ್ತವೆಂದು ಭಾವಿಸುವಂಥಾ ಇತರ ಯಾವದಾದರೂ ಇಲಾಖೇ ಮೂಲಕವಾದ ಶೀಕ್ಷೆಗಾಗಲಿ ಗುರಿಯಾಗುವದಕ್ಕೆ ಒಳಪಡತಕ್ಕದ್ದು.

2. ಗವರ್ಮೆಂಟಿನಿಂದ ಸಾಧಾರಣವಾಗಿ ಮೊಕರರ್ರಾಮಡಲ್ಪಡುವ ಆಫೀಸರುಗಳ ವಿಷಯದಲ್ಲಿ ಅವರುಗಳು, ಖುದ್ದಾಗಿಯಾಗಲೀ ಪರೋಕ್ಷವಾಗಿಯಾಗಲೀ ತಮ್ಮ ಹೆಸರಿನಲ್ಲಿಯಾದರೂ ಅಥವಾ ತಮಿಗೋಸ್ಕರ ಇತರರ ಹೆಸರಿನಲ್ಲಿಯಾದರೂ ಯಾವದಾದರೂ ಭೂಸ್ಥಿತಿಯನ್ನಾಗಲೀ ಅಥವಾ ಅದರಲ್ಲಿ ಯಾವ ಸಂಬಂಧವನ್ನಾಗಲೀ ಖುಷ್‌ಖರೀದಿ ಮೂಲಕವಾದರೂ ಆಧಾರವಾಗಿಯಾದರೂ ವರ್ಗಮೂಲಕವಾದರೂ ಅಥವಾ ಇನ್ಯಾವಮೂಲಕವಾದರೂ ಪಡೆಯುವದಕ್ಕೆ ಮುಂಚಿತವಾಗಿ ಗವರ್ಮೆಂಟಿನವರ ಮಂಜೂರಾತಿಯನ್ನು ಪಡೆಯತಕ್ಕದ್ದು. ಅಂಥಾ ಆಫೀಸರುಗಳ ವಿಷಯದಲ್ಲಿ ಅವರುಗಳ ಸ್ವಾಧೀನಕ್ಕೆ ಭೂಸ್ಥಿತಿಯಾಗಲಿ ಅದರಲ್ಲಿ ಸಂಬಂಧವಾಗಲೀ ಪಿತರಾರ್ಜಿತ ಹಕ್ಕಿನಮೂಲಕವಾದರೂ ಯಾ ದಾಯಭಾಗದ ಮೂಲಕವಾದರೂ ಪಡೆದಾಗ, ಡೆಪ್ಯೂಟಿ ಕಮ್ಮಿರ್ಷರವರು, 1863ನೇ ಇಸವಿ ಮೇ 29ನೇ ಮಕ್ತುಂ ವುಳ್ಳ ಇಸ್ತಿಹಾರ್‌ನಾಮೆಯ 3ನೇ ಕಲಂ ಅನುಸರಿಸಿ ಹಿಡುವಳಿ ಹಕ್ಕನ್ನು ರಿಜಿಸ್ಟರ್ ಮಾಡಿದ ತರುವಾಯ, ಸದರೀ ಸಂಗತಿಯನ್ನು ದಿವಾನರವರಿಗೆ ರಿಪೋರ್ಟು ಮಾಡತಕ್ಕದ್ದು.

ತಾರೀಖು 6ನೇ ಜನವರೀ 1887.

ಕ್ಯಾಂಪ್ ನಂಬರ್ 1552.—ಸನ್ 1882ನೇ ಇಸವಿ ಕ್ರಿಮಿನಲ್ ಪ್ರೊಸಿಜ್ಯೂರ್‌ಕೋಡಿನ 269 ವ 274ನೇ ಸೆಕ್ಷನ್‌ಗಳ ನಿಬಂಧನೆಗಳನ್ನನುಸರಿಸಿ, ಈ ಕೆಳಗೆ ನಮೂದಾಗುವ ತಕಸೀರ್‌ಗಳು, ಮೈಸೂರು ಚೀಫ್ ಕೋರ್ಟಿನ ಸೆಷನ್ ಕೋರ್ಟುಮುಂದೆ, ದರ್ಯಾಫ್ತೀ ಮಾಡಲ್ಪಡುವಾಗ ಜೂರಿಯಾನೆ ಐದು ಜನಗಳ ಪಂಚಾಯತಿಯು ಇರತಕ್ಕದ್ದೆಂದು ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೇ ಮಾಡುತ್ತಾರೆ.

ಇಂಡ್ಯನ್ ಪಿನಲ್‌ಕೋಡಿನ 379, 380 ವ 381 ಈ ಸೆಕ್ಷನ್‌ಗಳಿಗನುಸಾರವಾದ ಕಳವು.

384ರ ಲಾಗಾಯತು 389ನೇವರಿಗಿನ ಸೆಕ್ಷನ್‌ಗಳಿಗನುಸಾರವಾದ ಸುಲಿಗೆ.

392ರ ಲಾಗಾಯತು 395ನೇವರಿಗಿನ ವ 397ರ ಲಾಗಾಯತು 402ನೇ ವರಿಗಿನ ಸೆಕ್ಷನ್‌ಗಳಿಗನುಸಾರವಾದ ಜೋರೀ ಅಥವಾ ದರೋಡೇ ಕಳವು.

411, 412 ವ 414ನೇ ಸೆಕ್ಷನ್‌ಗಳಿಗನುಸಾರವಾದ ಜೋರೀ ಮಾಲನ್ನ ಈಸುಕೊಳ್ಳೋಣ.

451, 452, 454ರ ಲಾಗಾಯತು 459ವೆ 462ನೇ ಸೆಕ್ಷನ್‌ಗಳಿಗನುಸಾರವಾದ ಮನೆಗೆ ಅತಿಕ್ರಮ ಪ್ರವೇಶ ಮಾಡೋಣ ವಗೈರೆ.

406, 407, 408 ವ 409 ಈ ಸೆಕ್ಷನ್‌ಗಳಿಗನುಸಾರವಾದ ತಕಸೀರುಕರವಾದ ವಿಶ್ವಾಸ ಘಾತಕತೆ.

418, 419 ವ 420 ಈ ಸೆಕ್ಷನ್‌ಗಳಿಗನುಸಾರವಾದ ದಗಾಮಾಡೋಣ.

429ರ ಲಾಗಾಯತು 433 ವ 435ರ ಲಾಗಾಯತು 440 ವರಿಗಿನ ಸೆಕ್ಷನ್‌ಗಳಿಗನುಸಾರವಾದ ಕೆಡಕು.

ಮೇಲೆ ಹೇಳಲ್ಪಟ್ಟ ತಕಸೀರುಗಳ ಪೈಕಿ ಯಾವ ತಕಸೀರಿಗಾಗಲಿ ಕುಮ್ಮಕ್ಕು ಮಾಡೋಣ.

ತಾರೀಖು 21ನೇ ಜನವರೀ 1887.

ನಂ. 223.—1877ನೇ ಇಸವಿ ಜುಲೈ 14ನೇ ಮಕ್ತುಮಿನ ಮೈಸೂರ ಗೆಜೆಟ್ 198ನೇ ಪುಟದಲ್ಲಿ ಛಾಪಿಸೋಣಾದ ಅದೇ ಇಸವಿ ಜುಲೈ 10ನೇ ಮಕ್ತುಂವುಳ್ಳ ಲೇಟ್ ಚೀಫ್ ಕಮ್ಮಿರ್ಷರವರ 100ನೇ ನಂಬರ್ ಇಸ್ತಿಹಾರ್‌ನಾಮೆಯನ್ನ ಬದಲಾಯಿಸಿ ಇದರದೆಸೆಯಿಂದ ಪ್ರಕಟಪಡಿಸುವದೇನಂದರೆ, ತಿವಮೊಗ್ಗಾ, ವ ಕಡೂರು ಡಿಸ್ಟ್ರಿಕ್ಟುಗಳಲ್ಲಿ ಬೊಂಬುಗಳಿಗೋಸ್ಕರ, ಅಂಥಾ ಬೊಂಬುಗಳು ತೆಪ್ಪದಮೂಲಕವಾಗಲೀ ಭಂಡಿಗಳಮೇಲಾಗಲೀ ಸಾಗಿಸಲ್ಪಟ್ಟಾಗ್ಯೂ, ಕೊಡಲ್ಪಡುವ ಲೈಸೆನ್ಸುಗಳಿಗೋಸ್ಕರ ಇದರಜೀಕಂಡ ದರಗಳು ಮತ್ತೊಂದು ಹುಕ್ಕುಂ ಕೊಡುವ ಪರಿಯಂತ ವಸೂಲ್ಮಾಡಲ್ಪಡತಕ್ಕದ್ದು :—

ಹೆಬ್ಬಿದುರುಗಳಿಗೆ ದರ 100ಕ್ಕೆ 7 ರೂಪಾಯಿ ಪ್ರಕಾರ.

ಕಿರೀ ಬಿದುರುಗಳಿಗೆ, ದರ 100ಕ್ಕೆ ರೂ. 2—8—0 ರ ಪ್ರಕಾರ.

ಹುಕ್ಕುಂ, ಬಿಮೋಜೇಬ್,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರಿಟೇರಿ.